**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

**DTE-ADMI0ACM2/ 39 /2025(E-1804392)**

**ಆಯುಕ್ತರ ಕಛೇರಿ,**
**ತಾಂತ್ರಿಕ ಶಿಕ್ಷಣ ಭವನ,**
**ಅರಮನೆ ರಸ್ತೆ, ಬೆಂಗಳೂರು-560 001.**
**ದಿನಾಂಕ:10-06-2025.**

## -:: ಪ್ರವೇಶಾಧಿಸೂಚನೆ ::-

**ವಿಷಯ:-** 2025-26ನೇ ಸಾಲಿಗೆ **ಕೆಲಸ ಮಾಡುತ್ತಿರುವ ವೃತ್ತಿಪರ ಅಭ್ಯರ್ಥಿಗಳಿಗೆ** (Working Professionals) ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿ, ಆಫ್-ಲೈನ್ ಮೂಲಕ ಪ್ರವೇಶ ನೀಡುವ ಬಗ್ಗೆ.

**ಉಲ್ಲೇಖ:-**
1. ಎಐಸಿಟಿಇ, ನವದೆಹಲಿ ಇವರ ಸುತ್ತೋಲೆ ಸಂ. AICTE/P&AP/APH/2023-24/02, ದಿನಾಂಕ:24.08.2023.
2. ಸರ್ಕಾರದ ಪತ್ರ ಸಂ. ಇಡಿ 124 ಡಿಟಿಇ 2023, ದಿ:22.05.2024.
3. ಎಐಸಿಟಿಇ, ನವದೆಹಲಿ ಇವರ ಪರಿಷ್ಕೃತ ಮಾರ್ಗಸೂಚಿ ಸುತ್ತೋಲೆ ಸಂ. AICTE/RB/APH/2023-24/01, ದಿನಾಂಕ:10.06.2024.

********

ಎಐಸಿಟಿಇ, ನವದೆಹಲಿ ಇವರ ಉಲ್ಲೇಖ(1)ರ ಮಾರ್ಗಸೂಚಿಗಳಂತೆ ಎಐಸಿಟಿಇ ಇವರು ಅನುಮೋದಿಸಿರುವ ಆಯ್ದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಎಐಸಿಟಿಇ ಅನುಮೋದಿತ ಕೋರ್ಸುಗಳಲ್ಲಿ **ಕೆಲಸ ಮಾಡುತ್ತಿರುವ ವೃತ್ತಿಪರ ಅಭ್ಯರ್ಥಿಗಳಿಗೆ** (Working Professionals) ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ/3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ ಪ್ರವೇಶಾತಿಯನ್ನು ಕಲ್ಪಿಸಲು ಉಲ್ಲೇಖ(2)ರಲ್ಲಿ ಸರ್ಕಾರವು ಅನುಮೋದನೆ ನೀಡಲಾಗಿರುತ್ತದೆ.

ಅದರಂತೆ, 2025-26ನೇ ಸಾಲಿನಲ್ಲಿ ಈ ಕೆಳಕಂಡ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿನ ಡಿಪ್ಲೋಮಾ ಕೋರ್ಸುಗಳಿಗೆ ಲ್ಯಾಟರಲ್ ಎಂಟ್ರಿ 2ನೇ ವರ್ಷ/3ನೇ ಸೆಮಿಸ್ಟರ್ ಪ್ರವೇಶಕ್ಕಾಗಿ **ಕೆಲಸ ಮಾಡುತ್ತಿರುವ ವೃತ್ತಿಪರ ಅಭ್ಯರ್ಥಿಗಳಿಂದ** ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸ | ಪಾಲಿಟೆಕ್ನಿಕ್‌ನ ಹೆಸರು | ಸರ್ಕಾರಿ/ ಅನುದಾನಿತ/ ಖಾಸಗಿ | ಕೋರ್ಸುಗಳ ವಿವರ | 2025-26 ನೇ ಸಾಲಿಗೆ ಎಐಸಿಟಿಇಯು ಮಂಜೂರು ಮಾಡಿರುವ ಪ್ರವೇಶ ಸಂಖ್ಯೆ |
|---|---|---|---|---|
| **01** | ಸರ್ಕಾರಿ ಸಿ.ಪಿ.ಸಿ ಪಾಲಿಟೆಕ್ನಿಕ್, ಮೈಸೂರು | ಸರ್ಕಾರಿ | 1. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| | | | 2. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| | | | 3. ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ | 30 |
| | | | **ಒಟ್ಟು** | **90** |
| 02 | ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್ , ಕ್ರದಿ ಹಿಲ್ಸ್, ಮಂಗಳೂರು, ದ.ಕ ಜಿಲ್ಲೆ | ಸರ್ಕಾರಿ | 1. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| | | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| | | | **ಒಟ್ಟು** | **60** |
| **03** | ಬಿ.ಟಿ.ಎಲ್ ಪಾಲಿಟೆಕ್ನಿಕ್, (ಖಾಸಗಿ) ಹೊಸೂರು ರಸ್ತೆ, ಬೆಂಗಳೂರು | ಖಾಸಗಿ | 1. ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ | 30 |
| | | | 2. ಕಂಪ್ಯೂಟರ್ ಸೈನ್ಸ್ **&** ಇಂಜಿನಿಯರಿಂಗ್ | 30 |
| | **ಒಟ್ಟು** | | | **60** |
| 04 | ಎಸ್.ಸಿ.ಟಿ ಪಾಲಿಟೆಕ್ನಿಕ್, ಬೆಂಗಳೂರು | ಖಾಸಗಿ | 1. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| | | | 2. ಕಂಪ್ಯೂಟರ್ ಸೈನ್ಸ್ **&** ಇಂಜಿನಿಯರಿಂಗ್ | 30 |
| | | | 3. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| | **ಒಟ್ಟು** | | | **90** |
| 05 | ಹೈದ್ರಬಾದ್-ಕರ್ನಾಟಕ ಎಜುಕೇಷನ್ ಸೊಸೈಟೀಸ್ ಪಾಲಿಟೆಕ್ನಿಕ್, ಗುಲ್ಬರ್ಗ | ಖಾಸಗಿ | 1. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| | | | 2. ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ | 30 |

| | | | | |
|---|---|---|---|---|
| **ಒಟ್ಟು** | | | | **60** |
| 06 | ಡಿ.ವಿ.ಎಸ್ ಪಾಲಿಟೆಕ್ನಿಕ್,ಶಿವಮೊಗ್ಗ | ಖಾಸಗಿ | 1. ಸಿವಿಲ್ ಇಂಜಿನಿಯರಿಂಗ್ | 30 |
| | | | 2. ಕಂಪ್ಯೂಟರ್ ಸೈನ್ಸ್ **&** ಇಂಜಿನಿಯರಿಂಗ್ | 30 |
| | | | 3. ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **90** |
| 07 | ಸಂಜಯ್ ಮೆಮೋರಿಯಲ್ ಪಾಲಿಟೆಕ್ನಿಕ್, ಸಾಗರ | ಖಾಸಗಿ | 1. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| | | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| | | | 3. ಕಂಪ್ಯೂಟರ್ ಸೈನ್ಸ್ **&** ಇಂಜಿನಿಯರಿಂಗ್ | 30 |
| **ಒಟ್ಟು** | | | | **90** |
| 08 | ಕೆ.ವಿ ಪಾಲಿಟೆಕ್ನಿಕ್, ರಾಣೆಬೆನ್ನೂರು | ಖಾಸಗಿ | 1. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **30** |
| 09 | ಬಿ.ಟಿ ಪಾಟೀಲ್ ಅಂಡ್ ಸನ್ಸ್ ಪಾಲಿಟೆಕ್ನಿಕ್. ನಿಪ್ಪಾಣಿ | ಖಾಸಗಿ | 1. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| | | | 2. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **60** |
| 10 | ಆರ್.ಇ.ಎಸ್ ಪಾಲಿಟೆಕ್ನಿಕ್, ಬೆಂಗಳೂರು. | ಖಾಸಗಿ | 1. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **30** |
| 11 | ಸಂಜಯ್ ಗಾಂಧಿ ಪಾಲಿಟೆಕ್ನಿಕ್, ಬಳ್ಳಾರಿ | ಖಾಸಗಿ | 1. ಎಲೆಕ್ಟ್ರಿಕಲ್ **&** ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| | | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **60** |
| 12 | ವಿದ್ಯಾವರ್ಧಕ ಪಾಲಿಟೆಕ್ನಿಕ್, ಗೋಕುಲಂ. ಮೈಸೂರು | ಖಾಸಗಿ | 1. ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ | 30 |

| | | | | |
|---|---|---|---|---|
| | | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **60** |
| 13 | ಜಿ.ಎಂ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಪಾಲಿಟೆಕ್ನಿಕ್), ದಾವಣಗೆರೆ | ಖಾಸಗಿ | 1. ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 30 |
| | | | 2. ಮೆಕ್ಯಾನಿಕಲ್ ಇಂಜಿನಿಯರಿಂಗ್ | 30 |
| **ಒಟ್ಟು** | | | | **60** |

1. **ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ಇರಬೇಕಾದ ಕನಿಷ್ಟ ವಿದ್ಯಾರ್ಹತೆ:**

a) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರಬೇಕು.

b) ಅಭ್ಯರ್ಥಿಯು ಎಸ್.ಎಸ್.ಎಲ್.ಸಿ (10ನೇ ತರಗತಿ)ಯಲ್ಲಿ ತೇರ್ಗಡೆ ಹೊಂದಿದ ನಂತರ ಯಾವುದೇ ಅವಧಿಯಲ್ಲಿ 02 ವರ್ಷಗಳ ಐ.ಟಿ.ಐ ಕೋರ್ಸ್‌ನ್ನು/ದ್ವಿತೀಯ ಪಿಯುಸಿ (ವಿಜ್ಞಾನ/ತಾಂತ್ರಿಕ ವಿಷಯಗಳು)ಅನ್ನು ಕರ್ನಾಟಕದಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾಗಿರಬೇಕು.

**c) ಅಭ್ಯರ್ಥಿಯು ಎಸ್.ಎಸ್.ಎಲ್.ಸಿ (10ನೇ ತರಗತಿ) ಪಾಸಾದ ನಂತರ 02 ವರ್ಷಗಳ ಐ.ಟಿ.ಐ/ದ್ವಿತೀಯ ಪಿಯುಸಿ (ವಿಜ್ಞಾನ/ತಾಂತ್ರಿಕ ವಿಷಯಗಳು) ಅವಧಿ ಹೊರತುಪಡಿಸಿ, ಒಂದು ವರ್ಷದ ತಾಂತ್ರಿಕ ಕೆಲಸದ ಅನುಭವ ಹೊಂದಿದ್ದು, ಖಾಯಂ ಸೇವೆಯಲ್ಲಿ ತಾಂತ್ರಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರಬೇಕು.**

**Professionals working in Registered Industry / Organization (Central / State) / Private /Public Ltd Company / MSMEs located *the exisiting to 75 Km either from place of residence / working place to the enrolled Institution.***

**ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಮತ್ತು ಸರ್ಕಾರಿ ಸ್ವಾಮ್ಯದ ಕಾರ್ಖಾನೆ/ಕೈಗಾರಿಕೆ/ಸಂಸ್ಥೆಯು ಕೈಗಾರಿಕಾ ನೊಂದಣಿ ಕಛೇರಿ/ಎಸ್‌ಎಸ್‌ಐನಿಂದ ನೊಂದಾಯಿಸಿರುವ ಬಗ್ಗೆ ಪ್ರಮಾಣ ಪತ್ರವನ್ನು ಅರ್ಜಿಯ ಜೊತೆ ನೀಡಲಾಗಿರುವ ಅನುಬಂಧ-1 ನ್ನು ಲಗತ್ತಿಸಬೇಕು.**

d) ಅಭ್ಯರ್ಥಿಗಳು ಯಾವ ಐ.ಟಿ.ಐ ಕೋರ್ಸಿನ ಟ್ರೇಡ್‌ನಲ್ಲಿ ಉತ್ತೀರ್ಣರಾಗಿರುತ್ತಾರೋ ಅದೇ ಟ್ರೇಡ್‌ನ ಅನುಭವವನ್ನು ಹೊಂದಿರಬೇಕು.

2. **ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳು;**

ಅಭ್ಯರ್ಥಿಗಳು ಭಾರತದ ಪ್ರಜೆಯಾಗಿರಬೇಕು ಹಾಗೂ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ 1ನೇ ತರಗತಿಯಿಂದ 02 ವರ್ಷಗಳ ಐ.ಟಿ.ಐ/ಪಿ.ಯು.ಸಿ (ವಿಜ್ಞಾನ/ ತಾಂತ್ರಿಕ ವಿಷಯಗಳು) ಪರೀಕ್ಷೆಯನ್ನೊಳಗೊಂಡು, 07 ವರ್ಷಗಳ ವ್ಯಾಸಂಗ ಮಾಡಿರಬೇಕು. ಆದಾಗ್ಯೂ 07 ವರ್ಷಗಳ ವ್ಯಾಸಂಗದ ಷರತ್ತಿನಿಂದ ಕೆಲವು ವರ್ಗಗಳ ಅಭ್ಯರ್ಥಿಗಳಿಗೆ ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಂಶುಪಾಲರಿಂದ ಮಾಹಿತಿ ಪಡೆಯುವುದು.

**3. ಅರ್ಜಿ ಪಡೆಯುವ ಹಾಗೂ ಸಲ್ಲಿಸುವ ವಿಧಾನ:**

ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಮೇಲ್ಕಂಡ ಕೋರ್ಸುಗಳಿಗೆ ಪ್ರವೇಶ ಬಯಸುವ ವೃತ್ತಿಪರ ಅಭ್ಯರ್ಥಿಗಳು ಅರ್ಜಿಯನ್ನು **ದಿನಾಂಕ:12-06-2025 ರಿಂದ 25-06-2025** ರ ಒಳಗೆ ತಾಂತ್ರಿಕ ಶಿಕ್ಷಣ ಇಲಾಖೆಯ **dtek.karnataka.gov.in** or **dtetech.karnataka.gov.in/kartechnical** ವೆಬ್‌ಸೈಟ್‌ಗಳಿಂದ ಡೌನ್‌ಲೋಡ್ ಮಾಡಿಕೊಂಡು ಅರ್ಜಿ ನೋಂದಣಿ ಶುಲ್ಕವನ್ನು (ಸಾಮಾನ್ಯ/2ಎ/2ಬಿ/3ಎ/3ಬಿ = ರೂ.100/- & ಪ.ಜಾ/ಪ.ಪಂ/ ಪ್ರವರ್ಗ-1 = ರೂ. 50/-) ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಗದು ರೂಪದಲ್ಲಿ ಪಾವತಿಸುವುದು. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯನ್ನು ಪ್ರವೇಶ ಬಯಸುವ ಸಂಸ್ಥೆಯಲ್ಲಿಯೇ ಸಲ್ಲಿಸುವುದು.

**ಅಭ್ಯರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದ ವೇಳಾಪಟ್ಟಿಯು ಈ ಕೆಳಕಂಡಂತೆ ಇರುತ್ತದೆ.**

| | | |
|---|---|---|
| 01. | ಅರ್ಜಿ ಪಡೆಯಲು ಮತ್ತು ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ: | **12-06-2025 ರಿಂದ 25-06-2025 ರವರೆಗೆ** |
| 02 | ತಾತ್ಕಾಲಿಕ ಮೆರಿಟ್ ಪ್ರಕಟಣೆ | **26-06-2025** |
| 03 | ಅಂತಿಮ ಮೆರಿಟ್ ಪಟ್ಟಿ ಪ್ರಕಟಣೆ | **27-06-2025** |
| 04 | ಎಲ್ಲಾ ಹಂತಗಳ ಸೀಟು ಹಂಚಿಕೆ ಪ್ರಕ್ರಿಯೆ | **28-06-2025 ರಿಂದ 30-06-2025 ರವರೆಗೆ** |
| ಡಿಪ್ಲೋಮಾ ಸೀಟು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಹ ಅಭ್ಯರ್ಥಿಗಳಿಗೆ ಅವರುಗಳ ಮೆರಿಟ್ ಹಾಗೂ ಮೀಸಲಾತಿಗನುಗುಣವಾಗಿ ಸೀಟು ಹಂಚಿಕೆ ಮಾಡಲಾಗುವುದು. | | |

**4. ವಿಶೇಷ ಸೂಚನೆ:**

- ಮೀಸಲಾತಿಯಡಿಯಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಸಂದರ್ಶನ ದಿನದಂದು ಕಡ್ಡಾಯವಾಗಿ "ಜಾತಿ ಮತ್ತು ಆದಾಯ ಪರಿಶೀಲನಾ ಪ್ರಮಾಣ" ಪತ್ರ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳ ಪ್ರವೇಶವನ್ನು ಮೀಸಲಾತಿಯಲ್ಲಿ ಪರಿಗಣಿಸಲಾಗುವುದಿಲ್ಲ.

- ಕರ್ನಾಟಕ ಸರ್ಕಾರದ ರಾಜ್ಯ ಪತ್ರದಲ್ಲಿ ಭಾರತದ ಸಂವಿಧಾನದ ಅನುಚ್ಛೇದ 371(ಜೆ)ರನ್ವಯ ಕಲ್ಯಾಣ–ಕರ್ನಾಟಕ ಪ್ರದೇಶಾಭಿವೃದ್ಧಿಯಲ್ಲಿ ಮೀಸಲಾತಿಯನ್ನು ಕಲ್ಪಿಸಿದ್ದು, ಅದರಂತೆ, ಕಲ್ಯಾಣ–ಕರ್ನಾಟಕ ಕೋಟಾದಾಡಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

**ಸೀಟು ಆಯ್ಕೆ ಮಾಡಿಕೊಂಡು ಪ್ರವೇಶ ಪಡೆಯುವ ಐಟಿಐ ಹಾಗೂ ಪಿಯುಸಿ ವಿದ್ಯಾರ್ಥಿಗಳು ಈ ಕೆಳಕಂಡ ಕೋಷ್ಠಕ–01 & 02 ರಲ್ಲಿನ ಹೆಚ್ಚುವರಿಯಾಗಿ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಬೇಕಾಗಿರುತ್ತದೆ.**

**ಕೋಷ್ಠಕ–1**

ಎರಡು ವರ್ಷಗಳ ಐಟಿಐ ಟ್ರೇಡ್ ಉತ್ತೀರ್ಣರಾದ ಅಭ್ಯರ್ಥಿಗಳು ಸಂಬಂಧಿಸಿದ ಡಿಪ್ಲೋಮಾ ಕೋರ್ಸುಗಳ 02ನೇ ವರ್ಷ/03ನೇ ಸೆಮಿಸ್ಟರ್ (**ಉದಾ:–** ಎರಡು ವರ್ಷಗಳ ಎಲೆಕ್ಟ್ರಿಷಿಯನ್ ಟ್ರೇಡ್‌ನಲ್ಲಿ ಉತ್ತೀರ್ಣರಾದ ಅಭ್ಯರ್ಥಿಯು ಸಂಬಂಧಿಸಿದ ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಡಿಪ್ಲೋಮಾ ಕೋರ್ಸಿಗೆ) ಪ್ರವೇಶ ಪಡೆದಲ್ಲಿ, ಈ ಕೆಳಕಂಡ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಬೇಕಾಗಿರುತ್ತದೆ.

| Sl.No. | Bridge Course | To be taken in the Semester |
|---|---|---|
| 01. | C-20 Engineering Mathematics | 3rd Semester |
| 02. | C-20 Communication Skills | |
| 03. | C-20 Project Management Skills | 4th Semester |
| 04. | C-20 Statistics and Analytics | |

ದ್ವಿತೀಯ ಪಿ.ಯು.ಸಿ(ವಿಜ್ಞಾನ)/ಪಿಯುಸಿ(ತಾಂತ್ರಿಕ ವಿಷಯಗಳು)ಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಮುಖಾಂತರ 2ನೇ ವರ್ಷ / 3ನೇ ಸೆಮಿಸ್ಟರ್ ಡಿಪ್ಲೋಮಾ ಪ್ರವೇಶಕ್ಕೆ ಎ.ಐ.ಸಿ.ಟಿ.ಇ ಯ ಪ್ರವೇಶ ಮಾರ್ಗಸೂಚಿ ಪ್ರಕಾರ ಪ್ರವೇಶ ಪಡೆಯು ವ ವಿದ್ಯಾರ್ಥಿಗಳು ಈ ಕೆಳಕಂಡ ಕೋಷ್ಠಕ–2 ರಲ್ಲಿನ ಬ್ರಿಡ್ಜ್ ಕೋರ್ಸುಗಳನ್ನು ಅಭ್ಯಸಿಸಬೇಕಾಗಿರುತ್ತದೆ.

**ಕೋಷ್ಠಕ–2**

| Sl.No | Diploma Programme | Bridge Course Code | Bridge Course Name | Semester in which bridfge course to be taken |
|---|---|---|---|---|
| 01. | All Technical Diploma Progrmmes | C-20 Computer Aided Engineering Drawing/C-20 Computer Aided Engineering Graphics / C-20Civil Engineering Graphics / C-20 Architecural Graphics (Relevant Drawing / Graphics course as prescribed in the respective C-20 1st Year diploma programme) | | 3rd Semester |
| | | C-20 IT Skills | | 3rd Semester |
| | | C-20 Project Management Skills | | 4th Semester |

**5. ಶುಲ್ಕ ನಿಗಧಿ:**

ಸರ್ಕಾರಿ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಕೆಳಗೆ ನಿಗಧಿಪಡಿಸಿರುವ ಶುಲ್ಕವನ್ನು ಪ್ರವೇಶ ಸಮಯದಲ್ಲಿ ನಗದು ರೂಪದಲ್ಲಿ ಕಡ್ಡಾಯವಾಗಿ ಪಾವತಿಸಬೇಕು. ತಪ್ಪಿದಲ್ಲಿ ಪ್ರವೇಶಕ್ಕೆ ಪರಿಗಣಿಸಲಾಗುವುದಿಲ್ಲ.

| ಕ್ರ.ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 01. | ಸರ್ಕಾರಿ ಪಾಲಿಟೆಕ್ನಿಕ್ | **2,940,/–** | **500/–** | **830/–** | **4,270/–** |
| 02. | ಖಾಸಗಿ ಪಾಲಿಟೆಕ್ನಿಕ್ (ಕರ್ನಾಟಕ ಅಭ್ಯರ್ಥಿಗಳಿಗೆ) | **12,075/–** | **500/–** | **830/–** | **13,405/–** |

* ಎನ್.ಎಸ್.ಎಸ್ ಘಟಕ ಇರುವ ಸಂಸ್ಥೆಗಳು ಮೇಲ್ಕಂಡ ಇತರೆ ಶುಲ್ಕದ ಜೊತೆಗೆ ರೂ.40/–ನ್ನು ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.

** ಎನ್.ಎಸ್.ಎಸ್ ಘಟಕ ಇಲ್ಲದ ಸಂಸ್ಥೆಗಳು ಮೇಲ್ಕಂಡ ಇತರೆ ಶುಲ್ಕದ ಜೊತೆಗೆ ರೂ.50/–ನ್ನು ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.

ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರುಗಳು ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ನಿಯಮಗಳ ಪ್ರಕಾರ **ದಿ:30–06–2025** ರ ಒಳಗೆ ತಮ್ಮ ಹಂತದಲ್ಲಿಯೇ ನಡೆಸಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

ಚಾಲ್ತಿಯಲ್ಲಿರುವ ವಿವಿಧ ನಿಯಮಗಳು ಮತ್ತು ಎಐಸಿಟಿಇ ಪ್ರವೇಶ ಮಾರ್ಗಸೂಚಿಯಲ್ಲಿ ಸೂಚಿಸಿರುವ ಅಂಶಗಳನ್ನು ಸ್ಪಷ್ಟವಾಗಿ ಗಮನದಲ್ಲಿರಿಸಿಕೊಂಡು ವಿದ್ಯಾರ್ಥಿಗಳ ಪ್ರವೇಶ ಮಾಡಿಕೊಳ್ಳಬೇಕೆಂದು ಹಾಗೂ ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

***ಪ್ರವೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀಕೃತ dtek.karnatak.gov.in ವೆಬ್‌ಸೈಟ್‌ನ್ನು ಸಂಪರ್ಕಿಸಬಹುದಾಗಿರುತ್ತದೆ.***

Digitally signed by
N Manjushree
Date: 12-06-2025
17:12:17

**ಆಯುಕ್ತರು**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**ಬೆಂಗಳೂರು**

**ಇವರಿಗೆ,**

1. ಪ್ರಾಂಶುಪಾಲರು, ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು.
2. ಪ್ರಾಂಶುಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು
3. ಪ್ರಾಂಶುಪಾಲರು, ಸಂಜಯ ಮೆಮೋರಿಯಲ್ ಪಾಲಿಟೆಕ್ನಿಕ್, ಸಾಗರ
4. ಪ್ರಾಂಶುಪಾಲರು, ಡಿ.ವಿ.ಎಸ್ ಪಾಲಿಟೆಕ್ನಿಕ್,ಶಿವಮೊಗ್ಗ
5. ಪ್ರಾಂಶುಪಾಲರು, ಸಂಜಯ್ ಗಾಂಧಿ ಪಾಲಿಟೆಕ್ನಿಕ್, ಬಳ್ಳಾರಿ
6. ಪ್ರಾಂಶುಪಾಲರು, ಹೈದ್ರಬಾದ್ ಕರ್ನಾಟಕ ಎಜುಕೇಷನ್ ಸೊಸೈಟೀಸ್ ಪಾಲಿಟೆಕ್ನಿಕ್, ಗುಲ್ಬರ್ಗ
7. ಪ್ರಾಂಶುಪಾಲರು, ಬಿ.ಟಿ.ಎಲ್ ಪಾಲಿಟೆಕ್ನಿಕ್, ಹೊಸೂರು ರಸ್ತೆ, ಬೆಂಗಳೂರು.
8. ಪ್ರಾಂಶುಪಾಲರು, ಎಸ್.ಸಿ.ಟಿ ಪಾಲಿಟೆಕ್ನಿಕ್, ಬೆಂಗಳೂರು
9. ಪ್ರಾಂಶುಪಾಲರು, ಕೆ.ವಿ ಪಾಲಿಟೆಕ್ನಿಕ್, ರಾಣೆಬೆನ್ನೂರು
10. ಪ್ರಾಂಶುಪಾಲರು, ಬಿ.ಟಿ ಪಾಟೀಲ್ ಅಂಡ್ ಸನ್ಸ್ ಪಾಲಿಟೆಕ್ನಿಕ್. ನಿಪ್ಪಾಣಿ
11. ಪ್ರಾಂಶುಪಾಲರು, ಆರ್.ಇ.ಎಸ್ ಪಾಲಿಟೆಕ್ನಿಕ್, ಬೆಂಗಳೂರು.
12. ಪ್ರಾಂಶುಪಾಲರು, ಜಿ.ಎಂ.ಐ.ಟಿ ಪಾಲಿಟೆಕ್ನಿಕ್, ದಾವಣಗೆರೆ
13. ಪ್ರಾಂಶುಪಾಲರು, ವಿದ್ಯಾವರ್ಧಕ ಪಾಲಿಟೆಕ್ನಿಕ್, ಮೈಸೂರು

} ಸೀಟು ಆಯ್ಕೆ ಪ್ರಕ್ರಿಯೆಯನ್ನು ತಮ್ಮ ಸಂಸ್ಥೆಗಳಲ್ಲಿಯೇ ನಡೆಸುವ ಬಗ್ಗೆ ತಮ್ಮ ಹಂತದಲ್ಲಿಯೇ ಕ್ರಮ ತೆಗೆದುಕೊಂಡು ನಿಯಮಗಳ ಪ್ರಕಾರ ಪ್ರವೇಶ ನಡೆಸುವಲ್ಲಿ ಸೂಕ್ತ ವ್ಯವಸ್ಥೆ ಮಾಡಿ ಆಯುಕ್ತಾಲಯಕ್ಕೆ ಮಾಹಿತಿ ನೀಡುವುದು. ಹಾಗೂ ಈ ಬಗ್ಗೆ ಪ್ರತ್ಯೇಕ ಮಾರ್ಗಸೂಚಿಯನ್ನು ಅಭ್ಯರ್ಥಿಗಳಿಗೆ ತಮ್ಮ ಸಂಸ್ಥೆಗಳಲ್ಲಿಯೇ ನೀಡುವುದು. ಹಾಗೂ ಸಂಸ್ಥೆಯ ಸೂಚನಾ ಫಲಕದಲ್ಲೂ ಸಹ ಪ್ರಕಟಿಸುವುದು.

<u>ಪ್ರತಿ ಮಾಹಿತಿಗಾಗಿ:-</u>

1) ಆಯುಕ್ತರ ಆಪ್ತಶಾಖೆಗೆ.
2) ನಿರ್ದೇಶಕರ ಆಪ್ತಶಾಖೆಗೆ.
3) ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6) ಇ-ಆಡಳಿತ ವಿಭಾಗಕ್ಕೆ - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7) ಡಿವಿಪಿ (1) & (2) ವಿಭಾಗಕ್ಕೆ ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
8) ಕಡತಕ್ಕೆ.